## ಬುತ್ತಿ ಚಿಗುರು

### ಮುನ್ನೂರು ಹೆಚ್ಚೇನಲ್ಲ

ಕ್ಲಿನಿಕ್ ಗೆ ಬಂದ ವ್ಯಕ್ತಿ ವೈದ್ಯನಿಗೆ, 'ಸರ್, ಮನೆಗೆ ಬರಲು ಎಷ್ಟು ಫೀಸು ಚಾರ್ಜ್ ಮಾಡ್ತೀರಿ?' ಎಂದು ಕೇಳಿದ. ಆಗ ಡಾಕ್ಟರ್ ಸಾಹೇಬ್ರು, 'ಏನಿಲ್ಲ, ಬರೀ ಮುನ್ನೂರು ರೂಪಾಯಿ' ಎಂದರು. 'ಸರಿ ಬನ್ನಿ' ಎಂದ ಆ ವ್ಯಕ್ತಿಯ ಜೊತೆಗೆ ಡಾಕ್ಟರು ತಮ್ಮ ಗಾಡಿಯಲ್ಲಿ ಆತನ ಮನೆಗೆ ಬಂದಾಗ ರೋಗಿ ಕಾಣಲೇ ಇಲ್ಲ. 'ಪೇಶೆಂಟ್ ಎಲ್ಲಿ?' ಎಂದು ಕೇಳಿದಾಗ ಆತ ವ್ಯಕ್ತಿ 'ಯಾವ ಪೇಶೆಂಟೂ ಇಲ್ಲ... ಆ ಹಾಳಾದ ಟ್ಯಾಕ್ಸಿಯವ ಇಲ್ಲಿಗೆ ಬರೋಕೆ ಆರುನೂರು ರೂಪಾಯಿ ಕೇಳ್ದ, ತಾವು ಮುನ್ನೂರು ರೂಪಾಯಿಯಲ್ಲಿ ಕರ್ಕೊಂಡು ಬಂದ್ರೀ ತುಂಬಾ ಥ್ಯಾಂಕ್ಸ್' ಎಂದಾಗ ಡಾಕ್ಟರ್ ಮುಖ ಇಂಗು ತಿಂದ ಮಂಗನಂತಾಗಿತ್ತು.

**ಅರವಿಂದ ಜಿ. ಜೋಷಿ**





### ವಿಷವೇರದ ರಹಸ್ಯ!

ಗುಂಡ ಒಂದು ಕಾಡಿನಲ್ಲಿ ಸುತ್ತಾಡುತ್ತಿದ್ದ. ಆಗ ಒಂದು ಹಾವು ಆತನ ಕಾಲಿಗೆ ಕಚ್ಚಿತು. ಗುಂಡನಿಗೆ ಸಿಟ್ಟು ಬಂತು ಮತ್ತು ಕಾಲು ಮುಂದೆ ಮಾಡಿ 'ಇಗೋ ಕಚ್ಚು, ಎಷ್ಟು ಬೇಕೋ ಅಷ್ಟು ಕಚ್ಚು' ಎಂದ. ಹಾವು ಮತ್ತೆ ಮೂರ್ನಾಲ್ಕು ಬಾರಿ ಕಚ್ಚಿತು. ಕೊನೆಗೆ ಸುಸ್ತಾಗಿ ಕೇಳಿತು, 'ನೀನು ಮನುಷ್ಯನೇನಯ್ಯ, ಇಷ್ಟು ಕಚ್ಚಿದರೂ ಮರದಂತೆ ನಿಂತೇ ಇದ್ದೀಯಲ್ಲ' ಎಂದಿತು. ಗುಂಡ ಉತ್ತರಿಸಿದ, 'ನಾನು ಮನುಷ್ಯನೇ ಕಣಯ್ಯಾ, ಮರವಲ್ಲ, ಆದರೆ ನನ್ನ ಈ ಕಾಲು ಮರದಿಂದ ಮಾಡಿದ್ದು, ನಕಲಿ' ಎಂದ.

**ರಮಣ್ ಶೆಟ್ಟಿ ರೆಂಜಾಳ್**